ಕವಿತೆ



ಸತ್ಯಮಂಗಲ ಮಹಾದೇವ

ಕಲೆ: ರಮೇಶ್ ಚವ್ಹಾಣ



# ಅನಂತ

ಎಲ್ಲೆಲ್ಲೂ ಕೆಸರಿದೆ ಎಂದು
ಕೊರಗಬೇಡಿ
ಅಲ್ಲೊಂದು ತಾವರೆ
ನಗುತ್ತಿರುತ್ತದೆ ನೋಡಿ

ಸೋತವೆಂದು ಸೊರಗಬೇಡಿ
ಸೋತವರ ಕಥೆಗಳು ಅನೇಕ ಹೃದಯಗಳಲ್ಲಿವೆ
ಅಲ್ಲಿ ನೀವುನಾನೂ ಇರಬಹುದು
ಒಮ್ಮೆ ಭೇಟಿ ನೀಡಿ

ಬರಗಾಲ ಬಂತೆಂದು ಬೆದರಬೇಡಿ
ಮಳೆಗಾಗಿ ಕಾಯುತ್ತಾ
ಬೆಂದ ಬೀಜಗಳನ್ನು ನೋಡಿ
ಮಳೆ ಬಂದಾಗ ಚಿಗುರುವ
ಸಂಯಮವನ್ನು ಕಲಿತುಕೊಳ್ಳಿ

ಕತ್ತಲಾಯಿತೆಂದು ಕೊರಗಬೇಡಿ
ಕತ್ತೆತ್ತಿ ನೋಡಿದರೆ
ಸಾಲು ಸಾಲು ಕಣ್ಣ ಬೆಳಕಿನ ದೀಪಗಳಿರುತ್ತವೆ
ಕಣ್ತೆರೆದು ನೋಡಿ
ಬೆಳಕಿನ ಜೀವಂತಿಕೆಯನ್ನು ಎದೆಗೆ ಬಸಿದುಕೊಳ್ಳಿ

ಹಾಡುಗಳು ಮುಗಿದವೆಂದು ಬೇಸರಿಸಬೇಡಿ
ಹೊಸ ವಸಂತಗಳಿಗಾಗಿ
ಇಂದಿನ ಸಂಜೆಗಳು ಸಿದ್ಧವಾಗುತ್ತಿವೆ ನೋಡಿ
ಗಾಯಗಳಿಗೆ ಹೊಸ ಲಯವಿದೆ
ಗಾಯಗಳನ್ನೇ ಕುರಿತು ಹಾಡಿ
ಗಾಯಗೊಂಡವರು ಅನೇಕರಿದ್ದಾರೆ
ನಿಮ್ಮಂತೆ ನನ್ನಂತೆ

ಹಸಿವು ನೀರಡಿಕೆಗಾಗಿ ಪರಿತಪಿಸಬೇಡಿ
ನಾಳೆಗೆಂದು ಕೂಡಿಡದೆ
ಅನಂತ ಆಗಸಕ್ಕೆ ಹಾರುವ ಹಕ್ಕಿಗಳ ನೋಡಿ
ನೋವುಗಳ ಮೀರಿ ಹಾರುವ
ಹೊಸ ಕನಸುಗಳ ಗುರುತಿಸಿಕೊಳ್ಳಿ
ನಾನೂನೀವು ಎಲ್ಲೆಗಳಿರದ ಬಯಲಲ್ಲಿ
ಭೇಟಿಯಾಗೋಣ ಬನ್ನಿ